# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 237
ಮಾನ್ಯ ಸದಸ್ಯರ ಹೆಸರು : ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸಬೇಕಾದ ದಿನಾಂಕ : 10.12.2024
ಉತ್ತರಿಸುವ ಸಚಿವರು : ಪೌರಾಡಳಿತ ಮತ್ತು ಹಜ್ ಸಚಿವರು

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಶಿವಮೊಗ್ಗ ನಗರ ಸೇರಿದಂತೆ ರಾಜ್ಯದ ನಗರಗಳಲ್ಲಿ ದಿನನಿತ್ಯ ಘನತ್ಯಾಜ್ಯ ಪ್ರಮಾಣವೆಷ್ಟು ಹಾಗೂ ಇದರ ವಿಲೇವಾರಿಗೆ ಸರ್ಕಾರ ಕೈಗೊಂಡ ಕ್ರಮಗಳೇನು; (ಜಿಲ್ಲಾವಾರು ಮಾಹಿತಿ ನೀಡುವುದು) | ಶಿವಮೊಗ್ಗ ಮಹಾನಗರಪಾಲಿಕೆಯ ವ್ಯಾಪ್ತಿಯಲ್ಲಿ ಪ್ರತಿನಿತ್ಯ ಸುಮಾರು 175 ಟನ್ ತ್ಯಾಜ್ಯ ಉತ್ಪಾದನೆಯಾಗುತ್ತಿದೆ.<br><br>ಶಿವಮೊಗ್ಗ ನಗರ ಸೇರಿದಂತೆ ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ದಿನನಿತ್ಯ 6640 ಟನ್ ಘನ ತ್ಯಾಜ್ಯ ಉತ್ಪಾದನೆಯಾಗುತ್ತಿದೆ ಹಾಗೂ 4840 ಟನ್ ತ್ಯಾಜ್ಯ ಸಂಸ್ಕರಣೆಯಾಗುತ್ತಿದೆ. ಜಿಲ್ಲಾವಾರು ಮಾಹಿತಿಯನ್ನು **ಅನುಭಂದ -1**ರಲ್ಲಿ ಲಗತ್ತಿಸಿದೆ.<br><br>ರಾಜ್ಯದ ಎಲ್ಲಾ ನಗರ ಸ್ಥಳಿಯ ಸಂಸ್ಥೆಗಳಲ್ಲಿ ಉತ್ಪಾದನೆಯಾಗುವ ಘನತ್ಯಾಜ್ಯ ವಸ್ತುಗಳನ್ನು ವೈಜ್ಞಾನಿಕವಾಗಿ ನಿರ್ವಹಣೆ ಮಾಡಲು ಈ ಕೆಳಕಂಡ ಕ್ರಮಗಳನ್ನು ವಹಿಸಲಾಗಿರುತ್ತದೆ.<br><br>• ಸ್ವಚ್ಛ ಭಾರತ ಮಿಷನ್ ಯೋಜನೆಯಡಿ ನಗರ ಸ್ಥಳೀಯ ಸಂಸ್ಥೆಗಳಿಗೆ ಘನ ತ್ಯಾಜ್ಯ ಸಂಗ್ರಹಣೆ, ಸಾಗಾಣಿಕೆ, ಸಂಸ್ಕರಣೆ ಮತ್ತು ವೈಜ್ಞಾನಿಕ ವಿಲೇವಾರಿಗಾಗಿ ಅಗತ್ಯವಿರುವ ವಾಹನ-ಯಂತ್ರೋಪಕರಣಗಳು, Windrow platform, Processing shed, Trommel screen, Leachate collection tank, Compound wall, Weigh Bridge, Security room ಇತ್ಯಾದಿ ಕಾಮಗಾರಿಗಳನ್ನು ಪ್ರಸ್ತಾಪಿಸಿ ರೂ. 1195.51 ಕೋಟಿಗಳ ಬಂಡವಾಳ ಮೊತ್ತದ ಡಿ.ಪಿ.ಆರ್.ಗಳಿಗೆ ಜಿಲ್ಲಾ ಹಾಗು ರಾಜ್ಯ ಮಟ್ಟದ ಸಮಿತಿಯ ಅನುಮೋದನೆಯನ್ನು ನೀಡಲಾಗಿದೆ.<br><br>• ಘನತ್ಯಾಜ್ಯ ನಿರ್ವಹಣೆಗೆ ಅಗತ್ಯವಿರುವ ಮೂಲಭೂತ ಸೌಕರ್ಯವನ್ನು ಅಭಿವೃದ್ಧಿ ಪಡಿಸಲು ಬಂಡವಾಳ ಮೊತ್ತವನ್ನು ಸ್ವಚ್ಛ ಭಾರತ ಮಿಷನ್ ಯೋಜನೆಯಡಿ ಒದಗಿಸಲಾಗಿದೆ. ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ಸ್ವಚ್ಛ ಭಾರತ ಮಿಷನ್(ನಗರ) - 1.0 ಅಡಿ ಈಗಾಗಲೇ ರೂ. 854 ಕೋಟಿಗಳನ್ನು ಬಿಡುಗಡೆ ಮಾಡಲಾಗಿದೆ. ಹಾಗೂ ಸ್ವಚ್ಛ ಭಾರತ ಮಿಷನ್(ನಗರ)- 2.0 ಯೋಜನೆಯಡಿ ರೂ. 709.30 ಕೋಟಿಗಳನ್ನು ಮೀಸಲಿರಿಸಿದೆ. |

| | | |
|---|---|---|
| | | • ನಗರ ಸ್ಥಳೀಯ ಸಂಸ್ಥೆಗಳಲ್ಲಿ ದಿನನಿತ್ಯದ ತ್ಯಾಜ್ಯ ನಿರ್ವಹಣೆಗೆ ತಗಲುವ ವೆಚ್ಚವನ್ನು ಕ್ರೂಡೀಕರಿಸಿ ಸುಸ್ಥಿರತೆ ಸಾಧಿಸಲು ರಾಜ್ಯ ಸರ್ಕಾರದಿಂದ ಮಾದರಿ ಘನತ್ಯಾಜ್ಯ ನಿರ್ವಹಣೆ ಉಪನಿಯಮಗಳು 2019ನ್ನು ಎಲ್ಲಾ ಮಹಾನಗರಪಾಲಿಕೆಗಳು ಮತ್ತು ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಿಗೆ ಅನ್ವಯವಾಗುವಂತೆ ಜಾರಿಗೊಳಿಸಲಾಗಿರುತ್ತದೆ. ಸದರಿ ಉಪನಿಯಮಗಳಲ್ಲಿ SWM user fees ನ್ನು ಸಂಗ್ರಹಿಸಲು ತಿಳಿಸಲಾಗಿರುತ್ತದೆ ಹಾಗು ತ್ಯಾಜ್ಯವನ್ನು ಎಲ್ಲೆಂದರಲ್ಲಿ ವಿಲೇವಾರಿ ಮಾಡಿದರೆ/ ತ್ಯಾಜ್ಯವನ್ನು ಸುಟ್ಟರೆ/ ತ್ಯಾಜ್ಯ ವಿಂಗಡಣೆ ಮಾಡದಿದ್ದ ಪಕ್ಷದಲ್ಲಿ ಇತ್ಯಾದಿ ನಿಯಮ ಉಲ್ಲಂಘನೆ ಮಾಡಿದ ತ್ಯಾಜ್ಯ ಉತ್ಪಾದಕರಿಗೆ ದಂಡ ವಿಧಿಸಲು ತಿಳಿಸಲಾಗಿರುತ್ತದೆ. |
| (ಆ) | ಘನತ್ಯಾಜ್ಯ ನಿರ್ವಹಣೆಯ ಬಗ್ಗೆ ಬಹಳಷ್ಟು ದೂರುಗಳಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? (ವಿವರಿಸುವುದು) | ಹೌದು, ಕೆಲವೊಂದು ನಗರ ಸ್ಥಳೀಯ ಸಂಸ್ಥೆಗಳಲ್ಲಿನ ಘನ ತ್ಯಾಜ್ಯ ನಿರ್ವಹಣೆಯ ಬಗ್ಗೆ ಕೆಲವು ದೂರುಗಳು ಪೌರಾಡಳಿತ ನಿರ್ದೇಶನಾಲಯದಲ್ಲಿ ವರದಿಯಾಗಿರುತ್ತದೆ.<br><br>ಘನತ್ಯಾಜ್ಯ ನಿರ್ವಹಣೆಯಲ್ಲಿನ ದೂರುಗಳನ್ನು ಪರಿಹರಿಸಲು ಸರ್ಕಾರದಿಂದ ಬಹಳಷ್ಟು ಕ್ರಮಗಳನ್ನು ವಹಿಸಲಾಗಿದೆ.<br><br>• ಕೇಂದ್ರ ಸರ್ಕಾರವು ಜಾರಿಗೆ ತಂದಿರುವ ಘನತ್ಯಾಜ್ಯ ನಿರ್ವಹಣೆ ನಿಯಮಗಳು, 2016ರ ಉಪಬಂಧಗಳನ್ವಯ ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಸಮರ್ಪಕ ಹಾಗೂ ವೈಜ್ಞಾನಿಕ ತ್ಯಾಜ್ಯ ನಿರ್ವಹಣೆ ಮತ್ತು ವಿಲೇವಾರಿಗಾಗಿ ಸ್ವಚ್ಛ ಭಾರತ್ ಮಿಷನ್ (ನಗರ) ಯೋಜನೆಯಡಿ ಎಲ್ಲಾ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ.<br><br>• ಅದರಂತೆ ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಪ್ರತಿದಿನ ಉತ್ಪತ್ತಿಯಾಗುವ ತ್ಯಾಜ್ಯ ವಸ್ತುಗಳ ವಿಂಗಡಣೆ, ಮನೆ-ಮನೆಗಳಿಂದ ತ್ಯಾಜ್ಯ ಸಂಗ್ರಹಣೆ, ಪ್ರಥಮ ಹಾಗೂ ದ್ವಿತೀಯ ಹಂತದ ತ್ಯಾಜ್ಯ ಸಾಗಾಣಿಕೆ, ವೈಜ್ಞಾನಿಕ ತ್ಯಾಜ್ಯ ಸಂಸ್ಕರಣೆ ಹಾಗೂ ವಿಲೇವಾರಿಗಾಗಿ ಎಲ್ಲಾ ಅಗತ್ಯ ಸೌಲಭ್ಯ / ವ್ಯವಸ್ಥೆಗಳನ್ನು ಕಲ್ಪಿಸಲಾಗುತ್ತಿದೆ.<br><br>• 192 ನಗರ ಸ್ಥಳೀಯ ಸಂಸ್ಥೆಗಳಲ್ಲಿ ಬಹಳ ವರ್ಷದಿಂದ ಶೇಖರಣೆಯಾಗಿರುವ ಸುಮಾರು 74 ಲಕ್ಷ ಟನ್ ಪಾರಂಪರಿಕ ತ್ಯಾಜ್ಯವನ್ನು ತೆರವುಗೊಳಿಸಲು ನಗರಗಳು ಸಿದ್ಧಪಡಿಸಿದ ಡಿ.ಪಿ.ಆರ್.ಗಳಿಗೆ ಅನುಮೋದನೆ ನೀಡಲಾಗಿರುತ್ತದೆ. 91 ನಗರಗಳು ಟೆಂಡರ್ ಗಳನ್ನು ಕರೆದಿರುತ್ತವೆ. 18 ನಗರಗಳಲ್ಲಿ ಕೆಲಸ ಪ್ರಾರಂಭಗೊಂಡಿರುತ್ತದೆ ಹಾಗೂ 7 ನಗರಗಳಲ್ಲಿ Bioremediation ಕೆಲಸ ಈಗಾಗಲೇ ಪೂರ್ಣಗೊಂಡಿರುತ್ತದೆ. |

| | | |
|---|---|---|
| | | • ತ್ಯಾಜ್ಯ ನಿರ್ವಹಣೆಯಲ್ಲಿ ಸಾರ್ವಜನಿಕರ ಪಾತ್ರವನ್ನು ತಿಳಿಸಿ, ಅರಿವು ಮೂಡಿಸಲು ಹೆಚ್ಚಿನ ಒತ್ತು ನೀಡಿ ನಗರ ಸ್ಥಳೀಯ ಸಂಸ್ಥೆಗಳ ಮಟ್ಟದಲ್ಲಿ, ಹಾಗೂ ರಾಜ್ಯ ಮಟ್ಟದಲ್ಲಿ ವಿವಿಧ ಐ.ಇ.ಸಿ. ಚಟುವಟಿಕೆಗಳನ್ನು ಕೈಗೊಳ್ಳಲಾಗುತ್ತಿದೆ.<br><br>• ನಗರ ಸ್ಥಳೀಯ ಸಂಸ್ಥೆಗಳಲ್ಲಿನ ಚುನಾಯಿತ ಪ್ರತಿನಿಧಿಗಳು, ಘನತ್ಯಾಜ್ಯ ನಿರ್ವಹಣೆಯಲ್ಲಿ ತೊಡಗಿರುವ ಅಧಿಕಾರಿಗಳು, ಪರಿಸರ ಅಭಿಯಂತರರು, ಆರೋಗ್ಯ ನಿರೀಕ್ಷಕರು, ಪೌರಕಾರ್ಮಿಕರು, ಸ್ವಚ್ಛತಾ ಕೆಲಸಗಾರರ ಸಾಮರ್ಥ್ಯ ಅಭಿವೃದ್ಧಿಗಾಗಿ ರಾಜ್ಯ ಹಾಗು ನಗರ ಸ್ಥಳೀಯ ಸಂಸ್ಥೆಯ ಮಟ್ಟದಲ್ಲಿ ತರಬೇತಿಗಳನ್ನು ಆಯೋಜಿಸಲಾಗುತ್ತಿದೆ. |

(ಕಡತ ಸಂಖ್ಯೆ: ನಅಇ 238 ಸಿಎಸ್ಎಸ್ 2024)

**(ರಹೀಂ ಖಾನ್)**
ಪೌರಾಡಳಿತ ಹಾಗೂ ಹಜ್ ಸಚಿವರು

| ರಾಜ್ಯದಲ್ಲಿ ಉತ್ಪತಿಯಾಗುತ್ತಿರುವ ಮತ್ತು ಸಂಸ್ಕರಣೆಯಾಗುತ್ತಿರುವ ತ್ಯಾಜ್ಯದ ಜಿಲ್ಲಾವಾರು ವಿವರ | | | | |
|---|---|---|---|---|
| ಕ್ರ. ಸಂ. | ಜಿಲ್ಲೆಯ ಹೆಸರು | ತ್ಯಾಜ್ಯ ಉತ್ಪತಿ (ಟಿ.ಪಿ.ಡಿ) | ಸಂಸ್ಕರಣೆ (ಟಿ.ಪಿ.ಡಿ) | ಬಾಕಿ (ಟಿ.ಪಿ.ಡಿ) |
| 1 | ಬೆಂಗಳೂರು ಗ್ರಾಮಾಂತರ | 135 | 117 | 19 |
| 2 | ಬೆಂಗಳೂರ ನಗರ | 145 | 120 | 25 |
| 3 | ಚಿಕ್ಕಬಳ್ಳಾಪುರ | 107 | 46 | 61 |
| 4 | ಚಿತ್ರದುರ್ಗ | 129 | 111 | 18 |
| 5 | ದಾವಣಗೆರೆ | 235 | 189 | 46 |
| 6 | ಕೋಲಾರ | 222 | 107 | 115 |
| 7 | ರಾಮನಗರ | 126 | 58 | 68 |
| 8 | ಶಿವಮೊಗ್ಗ | 318 | 262 | 56 |
| 9 | ತುಮಕೂರು | 255 | 184 | 71 |
| 10 | ಚಾಮರಾಜನಗರ | 73 | 51 | 22 |
| 11 | ಚಿಕ್ಕಮಗಳೂರು | 114 | 65 | 49 |
| 12 | ದಕ್ಷಿಣ ಕನ್ನಡ | 412 | 391 | 21 |
| 13 | ಹಾಸನ | 140 | 112 | 28 |
| 14 | ಕೊಡಗು | 41 | 25 | 16 |
| 15 | ಮಂಡ್ಯ | 139 | 95 | 43 |
| 16 | ಮೈಸೂರು | 571 | 508 | 63 |
| 17 | ಉಡುಪಿ | 116 | 97 | 18 |
| 18 | ಬಾಗಲಕೋಟೆ | 237 | 163 | 74 |
| 19 | ಬೆಳಗಾವಿ | 581 | 365 | 192 |
| 20 | ಧಾರವಾಡ | 466 | 414 | 52 |
| 21 | ಗದಗ | 148 | 69 | 79 |
| 22 | ಹಾವೇರಿ | 131 | 68 | 63 |
| 23 | ಉತ್ತರ ಕನ್ನಡ | 137 | 109 | 28 |
| 24 | ಬಳ್ಳಾರಿ | 282 | 169 | 113 |
| 25 | ಬೀದರ | 166 | 139 | 27 |
| 26 | ವಿಜಯಪುರ | 231 | 159 | 72 |
| 27 | ಕಲಬುರಗಿ | 361 | 330 | 31 |
| 28 | ಕೊಪ್ಪಳ | 121 | 87 | 35 |
| 29 | ರಾಯಚೂರು | 220 | 98 | 122 |
| 30 | ವಿಜಯನಗರ | 196 | 97 | 100 |
| 31 | ಯಾದಗಿರಿ | 85 | 37 | 48 |
| **ಒಟ್ಟು** | | **6640** | **4840** | **1800** |

ಟಿ.ಪಿ.ಡಿ-ಟನ್ಸ್/ಡೇ